**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 492/2021**

**ಸಿ.ಡಬ್ಲ್ಯೂಃ 1**

**ಪಿ.ಡಬ್ಲೂಃ 1**

**ಸಾಕ್ಷಿದಾರರ ಹೆಸರು ಃ ನೀತು ರಾವ್ ಸಾಬ್ ಗೂಡೆ**

**ಗಂಡನ ಹೆಸರು ಃ ದಶರಥ್**

**ವಯಸ್ಸು ಃ 39 ವರ್ಷ**

**ಉದ್ಯೋಗ ಃ ಪಿ ಎಸ್ ಐ, ಪಿ ಟಿ ಎಸ್ ಧಾರವಾಡ**

**ವಾಸಸ್ಥಳ ಃ ಧಾರವಾಡ**

**ದಿನಾಂಕಃ 10.03.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ದಿನಾಂಕಃ 21.11.2019 ರಿಂದ 14.06.2021 ರವರೆಗೆ ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 11.9.2020 ರಂದು ಸಂಜೆ 7.00 ಗಂಟೆಗೆ ಬಾಳೆಹೊನ್ನೂರು ಪೊಲೀಸ್ ಠಾಣೆಯ ಪ್ರಭಾರದಲ್ಲಿದ್ದಾಗ ಬಾಳೆಹೊನ್ನೂರು ಮಾಗುಂಡಿಯಲ್ಲಿ ಗಸ್ತು ಮಾಡುತ್ತಿದ್ದಾಗ 7.15 ಗಂಟೆಗೆ ಬನ್ನೂರು ಬಸ್ ನಿಲ್ದಾಣದ ಹತ್ತಿರ ನಮ್ಮ ವಾಹನ ತಲುಪುತ್ತಿದ್ದಂತೆ ಅಲ್ಲಿದ್ದ ಒಬ್ಬ ಆಸಾಮಿ ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿದ್ದು, ನಾನು ಹಾಗೂ ನಮ್ಮ ಸಿಬ್ಬಂದಿಗಳಾದ ಚಾಸಾ-2 ರಿಂದ 5 ರವರುಗಳು ಸದರಿ ವ್ಯಕ್ತಿಯನ್ನು ಸುತ್ತುವರಿದು ಹಿಡಿದಿರುತ್ತೇವೆ. ಸದರಿ ವ್ಯಕ್ತಿಯನ್ನು ತಪಾಸಣೆ ಮಾಡಲಾಗಿ ಆತನ ಹೆಸರು ಮಹೇಶ್ ಯಾನೆ ಅಭಿ ಯಾನಿ ಅಭೀಕ್ಷ ಬಿನ್ ವೆಂಕಟೇಶ್ ಪೂಜಾರಿ ಎಂದು ತಿಳಿಸಿರುತ್ತಾರೆ. ಸದರಿ ವ್ಯಕ್ತಿಯ ಕೈಯಲ್ಲಿ ಒಂದು ಕಪ್ಪು ಬಣ್ಣದ ಬ್ಯಾಗ್ ಇದ್ದು, ಅದನ್ನು ತೆಗೆದು ತೋರಿಸುವಂತೆ ಸೂಚಿಸಿದ್ದು ಆತ ಅನುಮಾನಾಸ್ಪದವಾಗಿ ಅದನ್ನು ತೆರೆಯಲು ಹಿಂದೇಟು ಹಾಕಿದ್ದು, ತದನಂತರ ತೆರೆದು ತೋರಿಸಲು ಸೂಚಿಸಿದ್ದರಿಂದ ಸದರಿ ವ್ಯಕ್ತಿಯು ಅದನ್ನು ತೆಗೆದು ತೋರಿಸಿದ್ದು ಅದರಲ್ಲಿ ಪೇಪರ್ ನಲ್ಲಿ ಸುತ್ತಿದ್ದಂತಹ ಎಲೆ, ಹೂ, ಬೀಜ ಇರುವ ಸೊಪ್ಪಿನ ರೀತಿ ಇರುವ ಗಾಂಜಾದಂತೆ ಕಾಣುವ ವಸ್ತು ಇತ್ತು. ಸದರಿ ವಸ್ತುವನ್ನು ವಾಸನೆ ನೋಡಿದಾಗ ಅದು ಗಾಂಜಾ ಎಂದು ಮೇಲ್ನೋಟಕ್ಕೆ ಕಂಡು ಬಂದಿತು.

ಸದರಿ ಸಮಯ ಅವೇಳೆಯಾದ್ದರಿಂದ ನಾನು ನನ್ನ ಮೇಲಾಧಿಕಾರಿಗಳಿಂದ ಪೂರ್ವಾನುಮತಿ ಪಡೆಯಲು ಸಾಧ್ಯವಾಗಲಿಲ್ಲ. ಅದೇ ಕಾರಣದಿಂದ ನಾನು ಪತ್ರಾಂಖಿತ ಅಧಿಕಾರಿಯನ್ನು ಕರೆದುಕೊಂಡು ಅವರ ಸಮಕ್ಷಮ ಅಂಗಶೋಧನೆ ಮಾಡಲು ಸಾಧ್ಯವಾಗಲಿಲ್ಲ. ತದನಂತರ ಚಾಸಾ-5 ರವರ ಮೂಲಕ ಸ್ಥಳೀಯವಾಗಿ ಲಭ್ಯವಿದ್ದ ಪಂಚ ಸಾಕ್ಷಿದಾರರಾದ ಚಾಸಾ-6 ಮತ್ತು 7 ರವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಪ್ರಕರಣದ ಬಗ್ಗೆ ತಿಳಿಸಿ ಹೇಳಿ ಆರೋಪಿತರನ್ನು ಅಂಗಶೋಧನೆ ಮಾಡಲಾಗಿ ಆತನ ಪ್ಯಾಂಟಿನ ಬಲಜೇಬಿನಲ್ಲಿ ಒಂದು ರೆಡ್ಮಿ ಕಂಪನಿಯ ಮೊಬೈಲ್ ಫೋನ್ ದೊರಕಿತು ಹಾಗೂ ಆತನ ಕೈಯಲ್ಲಿದ್ದ ಪ್ಲಾಸ್ಟಿಕ್ ಕವರಿನಲ್ಲಿ ಪೇಪರ್ ನಲ್ಲಿ ಸುತ್ತಿದ್ದ 9 ಸುರಳಿ ಆಕಾರದಲ್ಲಿ ಇದ್ದ ಗಾಂಜಾ ವಸ್ತು ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಗಾಂಜಾವನ್ನು ಸ್ಥಳದಲ್ಲಿಯೇ ತೂಕ ಮಾಡಲಾಗಿ ಅದು ಒಟ್ಟು 52 ಗ್ರಾಂ ಇತ್ತು. ಆ ಸಂದರ್ಭದಲ್ಲಿ ಛಾಯಾಚಿತ್ರವನ್ನು ತೆಗೆದುಕೊಂಡಿರುತ್ತೇನೆ. ಮುಂದುವರೆದು ಆರೋಪಿತರನ್ನು ಸದರಿ ಗಾಂಜಾವನ್ನು ಎಲ್ಲಿಂದ ಪಡೆದುಕೊಂಡು ಬಂದೆ ಮತ್ತು ಅದನ್ನು ಸ್ವಾಧೀನ ಹೊಂದಲು ಪರವಾನಗಿ ಹೊಂದಿದ್ದೀಯಾ ಎಂದು ವಿಚಾರಿಸಲಾಗಿ ಆರೋಪಿತರು ಸದರಿ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡಲು ಮತ್ತು ಅದನ್ನು ಸೇವಿಸಲು ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಗಾಂಜಾವನ್ನು ಒಂದು ವಾರದ ಹಿಂದೆ ಬಾಳೆಹೊನ್ನೂರು ಕಡ್ಲೆಮಕ್ಕಿಯ 2 ನೇ ಆರೋಪಿತರಿಂದ ರೂ. 2000/- ಕೊಟ್ಟು ಖರೀದಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಗಾಂಜಾವನ್ನು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ಎಂ ಅಕ್ಷರದಿಂದ ಅರಗಿನಿಂದ ಸೀಲು ಮಾಡಿ ಅದಕ್ಕೆ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಸದರಿ ಮಹಜರನ್ನು ರಾತ್ರಿ 7.45 ರಿಂದ 8.45 ರವರೆವಿಗೂ ಸ್ಥಳದಲ್ಲಿಯೇ ದಾಖಲು ಮಾಡಿಕೊಂಡಿರುತ್ತೇನೆ. ಸದರಿ ಅಮಾನತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಮೂರು ಫೋಟೋಗಳನ್ನು ತೆಗೆದುಕೊಂಡಿರುತ್ತೇನೆ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು. ಸದರಿ ಆರೋಪಿತರು ಮತ್ತು ಸ್ವತ್ತುಗಳೊಂದಿಗೆ ಠಾಣೆಗೆ ಹಾಜರಾಗಿ ನಾನು ಘಟನೆಯ ಬಗ್ಗೆ ವರದಿಯನ್ನು ತಯಾರಿಸಿ ಚಾಸಾ-15 ರವರಿಗೆ ನೀಡಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ದಿನಾಂಕಃ 12.09.2020 ರಂದು ನಾನು ಮತ್ತೊಮ್ಮೆ ಕಡತವನ್ನು ಚಾಸಾ-15 ರವರಿಂದ ಪಡೆದುಕೊಂಡಿರುತ್ತೇನೆ. ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ಅದೇ ದಿನ ಇನ್ವೆಂಟರಿ ಮಾಡಲು ಚಾಸಾ-12 ರವರಿಗೆ ಮನವಿ ಪತ್ರ ನೀಡಿರುತ್ತೇನೆ. ಚಾಸಾ-12 ರವರು ನೀಡಿದ ಇನ್ವೆಂಟರಿ ವರದಿಯ ಸತ್ಯ ಪ್ರತಿಯನ್ನು ನೋಡಿ ಗುರುತಿಸಿದ್ದು ಆರೋಪಿ ಪರ ವಕೀಲರು ಸದರಿ ಪ್ರತಿ ಮೂಲ ಪ್ರತಿಯಾಗಿಲ್ಲದ ಕಾರಣ ನಿಶಾನೆಗೊಳಿಸಬಾರದು ಎಂದು ಆಕ್ಷೇಪಣೆ ಸಲ್ಲಿಸಿದ್ದು

ಮನ್ನಿಸಲಾಯಿತು. ಸದರಿ ಸಮಯದಲ್ಲಿ ತೆಗೆದುಕೊಂಡ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 6 ಮತ್ತು 7 ಎಂದು ಗುರುತಿಸಲಾಯಿತು.

ದಿನಾಂಕಃ 14.9.2020 ರಂದು ಚಾಸಾ-13 ರವರ ಮೂಲಕ ಎಫ್ ಎಸ್ ಎಲ್ ಗೆ ಮನವಿ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ದಿನಾಂಕಃ 16.9.2020 ರಂದು ಎಫ್ ಎಸ್ ಎಲ್ ರವರಿಂದ ಹಾಜರುಪಡಿಸಿದ ಹಿಂಬಹರವನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಹಿಂಬರಹವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಚಾಸಾ-13 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-16 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆದು ನೋಡಲಾಗಿ ಅದರಲ್ಲಿ 9 ಬಿಳಿ ಪೇಪರ್ ಗಳಲ್ಲಿ ಸುತ್ತಿರುವ ಗಾಂಜಾ ಸೊಪ್ಪು ಇರುವ ವಸ್ತು ಕಂಡು ಬಂದಿರುತ್ತದೆ. ಸದರಿ 9 ಪೇಪರ್ ಗಳಲ್ಲಿ ಸುತ್ತಿರುವ ಗಾಂಜಾ ಸೊಪ್ಪನ್ನು ಒಟ್ಟಾ ಎಂಒ-1 ಎಂದು ಗುರುತಿಸಲಾಯಿತು. ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಎಂಒ-2 ಎಂದು ಗುರುತಿಸಲಾಯಿತು. ಒಂದು ರೆಡ್ಮಿ ಕಂಪನಿಯ ಮೊಬೈಲ್ ಫೋನ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಎಂಒ-3 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಃಪಾಟೀ ಸವಾಲು ಆರೋಪಿತರ ಪರ ಶ್ರೀ.ಎನ್ ವಿ ಎಸ್ ವಕೀಲರಿಂದಃಃ

ನಾನು ಈ ಪ್ರಕರಣದಲ್ಲಿ 1 ನೇ ಆರೋಪಿತರನ್ನು ಅಂಗಶೋಧನೆ ಮಾಡಿ ಮಹಜರ್ ಮಾಡಿ ತದನಂತರ ಠಾಣೆಗೆ ಹಾಜರುಪಡಿಸಿದ ಬಳಿಕ ನನ್ನ ವರದಿಯನ್ನು ತಯಾರು ಮಾಡಿ ನಮ್ಮ ಮೇಲಾಧಿಕಾರಿಗಳಿಗೆ ನೀಡಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಇನ್ವೆಂಟರಿ ಮಾಡಲು ನ್ಯಾಯಿಕ ದಂಡಾಧಿಕಾರಿಗಳ ಸಮಕ್ಷಮ ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಇನ್ವೆಂಟರಿ ಮಾಡಲು ನ್ಯಾಯಿಕ ದಂಡಾಧಿಕಾರಿಗಳ ಸಮಕ್ಷಮ ಮನವಿ ಸಲ್ಲಿಸಲು ತೊಂದರೆ ಇತ್ತೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಕಲಂ 52(ಎ) ಎನ್ ಡಿ ಪಿ ಎಸ್ ಕಾಯ್ದೆಯಡಿಯಲ್ಲಿ ಇನ್ವೆಂಟರಿಯ ಮೂಲ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿತರು ದಾಳಿ ಮಾಡಿದ ಸಂದರ್ಭದಲ್ಲಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. 2 ನೇ ಆರೋಪಿತರ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. 1 ನೇ ಆರೋಪಿತರು 2 ನೇ ಆರೋಪಿತರಿಂದ ಮಾದಕ ವಸ್ತುವನ್ನು ಖರೀದಿ ಮಾಡಿರುವುದಾಗಿ ನಿಪಿ-5 ರಲ್ಲಿ ನಮೂದು ಮಾಡಿರುವ ವಿಚಾರ

ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಎಂಪಿ-1 ರಿಂದ 3 ಕ್ಕೂ 2ನೇ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ 2ನೇ ಆರೋಪಿತರನ್ನು ಸುಳ್ಳಾಗಿ ಆರೋಪಿ ಎಂದು ತೋರಿಸಿರುತ್ತೇನೆಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಃಃ ಮರು ವಿಚಾರಣೆ ಇಲ್ಲಃಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**